ತಾರೀಖು 5ನೇ ಜುಲೈ 1876.

3ನೇ ಗ್ರೇಡ್ ಓವರ್‌ಸೀರ್ ಮೆಸ್ಸರ್ ಸ್ಕಾರ್ಲೆಟ್ ಯವರು ಕೊಪ್ಪದಿಂದ ತುಮಕೂರು ಡಿವಿಜ್‌ಗೆ ವರ್ಗಮಾಡಲ್ಪಟ್ಟಿರುತ್ತಾರೆ. ಈ ವರ್ಗವು ಸರಕಾರ ಪ್ರಯೋಜನಾರ್ಥ ಮಾಡಲ್ಪಟ್ಟಿತು.

C. BOWEN, *Capt.*, R. E.,
Offg. Supt. Engineer, R. & B. Branch.

ತಾರೀಖು 3ನೇ ಜುಲೈ 1876,

ಕೋಲಾರ ರೇಂಜ್ 2ನೇ ನಂಬರ್ ಸಬ್ ಡಿವಿಜ್ ರೈಟರ್ ರಾಘವೇಂದ್ರರಾಯರಿಗೆ 1876ನೇ ಇಸವಿ ಜೂನ್ 27ರ ಲಗಾಯ್ತು 7 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

A. T. FRASER, *Capt.*, R. E.,
Exec. Engr., Bangalore-Kolar Division.

ತಾರೀಖು 3ನೇ ಜುಲೈ 1876.

ಅಸಿಸ್ಟೆಂಟ್ ಇಂಜಿನಿಯರ್ ಆಫಿಸ್ ರೈಟರ್ ವೆಂಕಟ್ರಾಮನಾಯಕರಿಗೆ 1876ನೇ ಯಿಸವಿ ಏಪ್ರಲ್ 24ನೇ ತಾರೀಕ್ ಲಗಾಯಿತು 3 ತಿಂಗಳ ಕಾಯಿಲೇ ರಜಾ ಕೊಡಲ್ಪಟ್ಟಿರುತ್ತೆ.

G. W. WHITE,
Asstt. Engineer, Túmkúr Division.

ಫಾರೆಸ್ಟ್ ಇಲಾಖಾ.

ತಾರೀಖು 30ನೇ ಮೇ 1876.

ಇದರಿಂದ ತಿಳಿಯಪಡಿಸುವದೇನಂದರೆ,—ದಾರವಾಡ ಜಿಲ್ಲಾ ಕೋಡಿ ತಾಲ್ಲೂಕು ಫಕೀರಪ್ಪಯಂಬ ಹೆಸರುಉಳ್ಳ ವೊಬ್ಬ ಮನುಷ್ಯನು ಸ॥ 1874ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಕೊಂಡುಕ್ಕೊಂಡ ಚೌಬಿನೇ ಪೈಕಿ ಉಳಿಸಿಕೊಳ್ಳಲ್ಪಡದ ವೊಂದು ಮರದ ದಿಮ್ಮಿಯು ಕೇಳಲ್ಪಡದೆ ಅದ್ಯಾಪಿ ನಗರ ಡಿವಿಜ್ ಶಿವಮೊಗ್ಗಾ ಡಿಸ್ಟ್ರಿಕ್ಟು ಅನಂತಪುರ ಡಿಪೊಯಲ್ಲಿ ಬಿದ್ದಿರುತ್ತೆ. ಸದರೀ ಫಕೀರಪ್ಪನೆಂಬುವನು ಶಿವಮೊಗ್ಗೆಯಲ್ಲಿರುವ ಡಿಪ್ಯೂಟಿ ಕಂಸರ್ವೇಟರ್ ಯವರಲ್ಲಿ ಹಾಜರಾಗಿ 1876ನೇ ಇಸವಿ ಜುಲೈ 31ನೇ ಮುಕ್ತಂವಿಗೆ ಮುಂಚಿತವಾಗಿ ಸದರೀ ದಿಮ್ಮಿಯನ್ನು ಸಾಗಿಸಿಕೊಂಡು ಹೋಗತಕ್ಕದ್ದು. ಯಿದಕ್ಕೆ ತಪ್ಪಿದರೆ ಸದರೀ ದಿಮ್ಮಿಯು ಬೇವಾರ್ಸ್ ಮರದೋ ಪಾವಿಯಲ್ಲಿ ಮೈಸೂರು ಗವರ್ಮೆಂಟ್ ತಪ್ಪ್ರ ವಿಕ್ರಯಿಸಲ್ಪಟ್ಟು ಅದರ ಹುಟ್ಟುವಳಿಯು ಫಾರೆಸ್ಟ್ ರೂಲ್ಸ್ 30 ವ 31ರ ನಿಬಂಧನೇಗಳನುಸಾರವಾಗಿ ಮೈಸೂರು ಫಾರಸ್ಟ್ ಇಲಾಖೆಗೆ ಜಮೆ ಕಟ್ಟಲ್ಪಡುವದು.

ನಂ. 9. ತಾರೀಖು 17ನೇ ಜೂನ್ 1876.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಶೀಮೆಯ ನಗರ ಡಿವಿಜ್ ನ ಗಳು ಇದರಡಿ ಕಾಣಿಸಲ್ಪಟ್ಟ ಸ್ಥಳಗಳಲ್ಲಿಯೂ ತಾರೀಖಿನಲ್ಲಿಯೂ ಬಹಿರಂಗವಾ ಕೆಳಗೆ ಕಂಡ ದೂ ಲ್ಪಡುವದು.

ಸ್ಥಳ ಮತ್ತು ತಾರೀಖು.	ತೇಗ.	ಬಿಟಿ.	ಕಾಡುಮರ.	ತೇಗದ ಕೊಜ್ಜಗಳು.	ಕಾಡುಮರದ ಜಿಗಳು.	ಗಳುಗಳು.	ಟ್ಟು.
ಲಕ್ಕುವಳ್ಳಿ.							
1876ನೇ ಇಸವಿ ಜುಲೈ ತಾ॥ 13ರಲ್ಲಿ.	3	0	446	0	2	446	897
ಶಿವಮೊಗ್ಗ.							
ಡಿಟೋ 24ನೇ ತಾರೀಖಿನಲ್ಲಿ. ..	189	52	563	524	282	3,451	5,061

ಹರಾಜ್ ನಿಬಂಧನೆ—ಸ್ಯ 1873ನೇ ಇಸವಿ ಜೂ್ಯ 12ನೇ ತಾರೀಖಿನಲ್ಲಿ ಮೈಸೂರು ಗೆಜೆಟ್‌ನಲ್ಲಿ ಘಾಯಿಷ್ ಮಾಡಲ್ಪಟ್ಟ ಪ್ರಕಾರ ಮಾಮೂಲ್ ಮೇರೆ ಯಿರುತ್ತೆ. ಸರ್‌ಕಿಲರ್ ಹರಾಜ್ ತಾರೀಖಿನಲ್ಲಿಯೂ ಆಯಾ ಸ್ಥಳದಲ್ಲಿಯೂ ಮೋದಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

ನಗರ ಡಿವೀಜ್ಯ.

ನಂ. 10. ತಾರೀಖು 26ನೇ ಜೂ್ಯ 1876.

ಷಿಕಾರಿಪುರ ತಾಲ್ಲೂಕು ಆಸ್ಟಿಂಗ್ ಮುರಹಮ್ಮತ್ ಮುತ್ಸದ್ದಿ ಕೇಶವೈಯ್ಯನವರಿಗೆ ಬಗರ್‌ಲೌಸ್ 4 ದಿನಗಳ ಜಾಸ್ತೀ ರಜಾ ಕೊಡಲ್ಪಟ್ಟಿರುತ್ತೆ.

ನಂ. 11. ತಾರೀಖು 29ನೇ ಜೂ್ಯ 1876.

ಇದರಡೀ ಬರುವ ಬಹಲ್‌ಗಳು ಮಂಜೂರಾಗಿವೆ.

ಷಿಕಾರಿಪುರ ತಾಲ್ಲೂಕು ಮುರಹಮ್ಮತ್ ಮುತ್ಸದ್ದೀ ಕೃಷ್ಣಯ್ಯಂಗಾರ್‌ರು ಬಡತೀ ಹೊಂದಿದ ಅನಂತರಾಮಸ್ವಾಮಯ್ಯಂಗಾರ್‌ರಿಗೆ ಬದಲಾಗಿ ಲೋಕಲ್‌ಫಂಡ್ ಇಂಜಿನಿಯರ್ ಆಫಿಸ್ ಮುತ್ಸದ್ದೀ ಕೆಲಸದಲ್ಲಿ ಕಾಯಂ ಮಾಡಲ್ಪಡತಕ್ಕದ್ದು. ಕೇಶವೈಯ್ಯನವರು ಕೃಷ್ಣಯ್ಯಂಗಾರ್‌ರಿಗೆ ಬದಲಾಗಿ ಷಿಕಾರಿಪುರತಾಲ್ಲೂಕು ಮುರಹಮ್ಮತ್ ಮುತ್ಸದ್ದೀ ಕೆಲಸದಲ್ಲಿ ಕಾಯಂಮಾಡಲ್ಪಡತಕ್ಕದ್ದು,

MAHOMED HUSEN BINTURI,
For Commr.

ASHTAGRAM DIVISION.

Notice regarding an application of Rahamat Bayi for a certificate under Act XXVII of 1860.

ಅಷ್ಟಗ್ರಾಮದ ಡಿ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರಲ್ಲಿ ಇರುವ ಹಾಜೀ ಜಾಫರ್‌ಶೀಟಿನ ಹೆಂಡತಿ ರಹಮತು ಬಾಯಿ ಯೆಂಬುವಳು ಘೂತೀಪಟ್ಟಿರುವ ತನ್ನ ಗಂಡನಿಗೆ ಹೊರಗಿನಿಂದ ಬರತಕ್ಕ ಸಾಲವನ್ನ ವಸೂಲ್ಮಾಡಿಕೊಳ್ಳುವದಕ್ಕೆ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಬೇಕೆಂತ ಕೊಟ್ಟ ಅರ್ಜೀ ಫೈನಲ್ ಬಗ್ಯೆ 1876ನೇ ಇಸವಿ ಜುಲೈ 28ನೇ ದಿವಸ ನಿಷ್ಕರ್ಷೆ ಮಾಡಿರುವದರಿಂದ ತಕರಾರು ಇರತಕ್ಕವರೆಲ್ಲಾ ಮೇಲ್ಕಂಡ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹಿರುಮಾಡಿಕೊಳ್ಳತಕ್ಕದ್ದಿದೆ.

ತಾರೀಖು 23 ಜೂ್ಯ 1876ನೇ ಇಸವಿ.

A. C. HAY,
Commr.

KOLAR DISTRICT.

Notice regarding the sale of the Jodi Kannabale village on the 28th instant in satisfaction of Government dues.

ಕೋಲಾರ ಡಿಸ್ಟ್ರಿಕ್ಟ್ ಡಿ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ತಿಳಿಸಲ್ಪಡುವದೇನಂದರೆ,—ಸಂಕ್ಷರ ಹಣ ಕೊಡಲಿಕ್ಕೆ ತಪ್ಪಿದ ಅಪ್ಪಣಾಚಾರ್ರು ವಗೈರೆಯಿಂದ ಸಲ್ಲತಕ್ಕ ಜಮ್ಮಿಕಂದಾಯದ ಬಾಕೀ ಪಡಿಚಾಕ್ಕೋಸ್ತರ ಜಪ್ತು ಮಾಡೋಣಾಗಿರುವ ಈ ಕೆಳಗೆ ಕಂಡ ಜಮ್ಮಿಗಳಮೇಲೆ ಹಾಲೀ ರಿಜಿಸ್ಟರ್‌ದಾರನಾದ ಸದರೀಯವನಿಗೆ ಯಿರುವ ದರೋಬಸ್ತು ಹಕ್ಕುದಾರಿಗಳೂ, ಕೋಲಾರ ಡಿಸ್ಟ್ರಿಕ್ಟ್ ಭೇತಮಂಗಲ ತಾಲ್ಲೂಕು ಜೋಡೀ ಕಣಿಂಬಲೆ ಗ್ರಾಮದಲ್ಲಿ 1876ನೇ ಇಸವಿ ಜುಲೈ ತಾರೀಖು 28ರಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುವದು, ಹರಾಜು ಸದರೀ ಗ್ರಾಮದಲ್ಲಿ ದಿವಿ 12 ಘಂಟೆಗೆ ಆರಂಭಿಸುವದು. ಸದರೀ ಜಮೀನುಗಳು ವಿಷ್ಟ ಬಾಧ್ಯತೆಗಳ್ಳೊಡನೆ ಚಡ್ಡಿ ದರಖಾಸ್ತುದಾರಗೆ ಕೊಟ್ಟು ಬಿಡುವದು.